ಮೊದಲ ವರ್ಷದ ಪರೀಕ್ಷೆಗಳು ಮುಗಿದು ಹಾಸ್ಟೆಲ್ ಮುಚ್ಚಿದ್ದರಿಂದ ನಟ ಅನಿವಾರ್ಯವಾಗಿ ಊರಿಗೆ ಬರಬೇಕಾಯಿತು. ಒಂಟಿಯಾದ ನಟನಿಗೆ ಗೆಳತಿ ಸನಿಹ ಇಲ್ಲದಿರುವಿಕೆ ಬಾಧಿಸತೊಡಗಿತು. ಲಲಿತಾಳನ್ನು ನೆನೆಯದ ಕ್ಷಣವೇ ಇಲ್ಲದೆ ಚಡಪಡಿಸತೊಡಗಿದ. ನೆಟ್‌ವರ್ಕ್ ಸಿಗದ ಊರಲ್ಲಿ ಅವಳೊಂದಿಗೆ ಮಾತಾಡಲೆಂದು ಹೊಲಮಾಳವನ್ನೆಲ್ಲ ಅಲೆದು ಕೊನೆಗೆ ಹಳೆ ಸಿಮ್ ಕಿತ್ತೆಸೆದು ಬೇರೊಂದು ನಂಬರ್ ಹಾಕಿಕೊಂಡ. ಅಂತೂ ಲಲಿತಾಳನ್ನು ಬಿಟ್ಟಿರಲು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ರಜೆಯಲ್ಲಿದ್ದ ನಟನ ಮನಸ್ಸು ಹಾತೊರೆಯತೊಡಗಿತು. ಪರಿಣಾಮವಾಗಿ ನಟನಿಗೆ ಗೆಳತಿಯೊಂದಿಗಿನ ಭೂತ ಭವಿಷ್ಯಗಳೆಲ್ಲ ರಿಲೆಯಾಗತೊಡಗಿದವು. ನನ್ನೊಂದಿಗೆ ಇಷ್ಟೊಂದು ಸಲಿಗೆಯಿಂದಿರುವ ಲಲಿತಾ ನನ್ನ ಪ್ರೇಮವನ್ನು ಒಪ್ಪಿಕೊಂಡರೇನೋ ಸರಿ, ಅಕಸ್ಮಾತ್ ಅವಳು ನೀನು ಇಷ್ಟು ಚೀಪ್ ಎಂದು ತಿಳಿದಿರಲಿಲ್ಲ ಎಂದು ವರಸೆ ಬದಲಿಸಿಬಿಟ್ಟರೆ ಈಗಿರುವ ಸ್ನೇಹವನ್ನೂ ಕಳೆದುಕೊಳ್ಳಬೇಕಾಗುತ್ತದಲ್ಲ ಎಂದು ಚಿಂತೆಗೀಡಾಗುತ್ತಿದ್ದ. ಇಷ್ಟಾದರೂ ಪರಸ್ಪರರು ಎಂದೂ ತಮ್ಮ ಜಾತಿ, ಉಪಜಾತಿಗಳು ಇಂಥವು ಎಂದು ಚರ್ಚಿಸಿರಲಿಲ್ಲ. ಲಲಿತಾ, ಜಯಂತನ ತಂಗಿ ಎಂದು ಗೊತ್ತಾದ ನಂತರವಂತೂ ಅವಳು ಎಂದಾದರೂ, 'ಅದ್ಸರಿ, ಇಷ್ಟೆಲ್ಲ ಮಾತಾಡೊ ನೀನು ಯಾವ ಜಾತಿ' ಎಂದು ಕೇಳಿ ಬಿಟ್ಟರೆ ಏನೆಂದು ಹೇಳುವುದೆಂದು ಚಿಂತಿಸಿ ಆ ಕ್ಷಣ ಬರದಿರಲೆಂದು ಆಶಿಸಿದ್ದ. 'ನಾನು ಪ್ರಖ್ಯಾತ ವಕೀಲ ಜಯಂತನ ತಂಗಿ' ಎಂದು ಬಾಯಿಬಿಟ್ಟು ಅವಳು ತಾನಾಗಿ ಹೇಳುವವರೆಗೆ ಕೇಳುವುದು ಬೇಡವೆಂದು ತೀರ್ಮಾನಿಸಿದ್ದ. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ತಮ್ಮಿಬ್ಬರ ಹಿನ್ನೆಲೆಗಳು ಚರ್ಚೆಗೆ ಬಾರದಿದ್ದರೇ ಸೊಗಸು ಎಂದು ಭಾವಿಸಿ, ಭವಿಷ್ಯದ ಸಂಕಟಗಳಿಗೆ ಬೆನ್ನು ತೋರಿದ್ದ.

ನೀನು ಈ ಕಾಲದಲ್ಲೂ ಯಾಕೆ ಫೇಸ್‌ಬುಕ್ ಅಕೌಂಟ್ ಹೊಂದಿಲ್ಲ, ಬಾ ನಾನೇ ಕ್ರಿಯೇಟ್ ಮಾಡಿಕೊಡ್ತೀನಿ ಎಂದು ಲಲಿತಾ ಒಮ್ಮೆ ಮೊಬೈಲ್ ಕಿತ್ತುಕೊಂಡಿದ್ದಳು. ಅಷ್ಟೇ ಪ್ರಯತ್ನ ಹಾಕಿ ಆಕೆಯಿಂದ ಮೊಬೈಲ್ ಬಿಡಿಸಿಕೊಂಡಿದ್ದ ನಟ ಕೊನೆಗೂ ಫೇಸ್‌ಬುಕ್ ಅಕೌಂಟ್ ಮಾಡಿಕೊಂಡಿರಲಿಲ್ಲ. ನಟನಿಗೆ ಅದರ ಅವಶ್ಯಕತೆ ಕಂಡು ಬಂದಿತ್ತಾದರೂ ಲಲಿತಾಳ ಸ್ನೇಹವಾದ ಮೇಲೆ ಇದರಿಂದ ದೂರವಿದ್ದರೆ ನಮ್ಮಿಬ್ಬರ ಸ್ನೇಹ ಇನ್ನೊಂದಷ್ಟು ಕಾಲ ಬಾಳಿಕೆ ಬರುತ್ತದೆ ಎಂದು ನಂಬಿದ್ದ. ನಮ್ಮ ವೈಯಕ್ತಿಕ ನೆಲೆಗಳು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಫೇಸ್‌ಬುಕ್‌ನಲ್ಲಿ ಪ್ರಕಟಗೊಳ್ಳುವುದರಿಂದ, ಇದು ನಮ್ಮಿಬ್ಬರ ಬೆಲೆಬಾಳುವ ಸ್ನೇಹಕ್ಕೆ ತೊಡರು ಎಂದು ಭಾವಿಸಿ ದೂರ ಉಳಿದಿದ್ದ.

ಒಂದು ತಿಂಗಳ ಅಲ್ಪ ರಜೆಯನ್ನು ಮುಗಿಸಿಕೊಂಡ ನಟ ಮತ್ತು ಲಲಿತಾ ಮತ್ತೆ ಕಾಲೇಜು ಶುರುವಾಗುವುದನ್ನೇ ಕಾದಿದ್ದರು. ಅಯಸ್ಕಾಂತದ ಪರಸ್ಪರ ವಿರುದ್ಧ ಧ್ರುವಗಳು ಆಕರ್ಷಿಸುವಂತೆ ಒಬ್ಬರನ್ನೊಬ್ಬರು ಸೆಳೆದುಕೊಂಡರು. ನಟ–ಲಲಿತಾ ಮತ್ತೆ ಸೇರಿದ್ದಕ್ಕಾಗಿ ಮನದಣಿಯೆ ನೋಡಿ ಮಣಿದರು. ಎರಡನೇ ವರ್ಷದ ಶುರುವೇ ಇವರಿಬ್ಬರನ್ನು ಇನ್ನೂ ಗಾಢಗೊಳಿಸಿತ್ತು. ರಾತ್ರಿ ಹನ್ನೆರಡು ಮೀರಿದರೂ ಪರಸ್ಪರ ಚಾಟ್ ನಿಲ್ಲುತ್ತಲೇ ಇರಲಿಲ್ಲ. ಬೈ, ಗುಡ್‌ನೈಟ್ ಹೇಳಿದ ಮೇಲೂ ಮಳೆ ಹನಿ ತೊಟ್ಟಿಕ್ಕಿದಂತೆ ಎಮೋಜಿಗಳು, ಸಿಂಬಲ್‌ಗಳು ವಿನಿಮಯ ಆಗುತ್ತಲೇ ಇರುತ್ತಿದ್ದವು.

ಪ್ರೇಮಿಗಳ ದಿನ ಹತ್ತಿರವಿದ್ದ ಒಂದು ರಾತ್ರಿ. ಹೀಗೆ ಮೆಸೇಜ್‌ಗಳು ವಿನಿಮಯವಾಗುತ್ತಿರುವಾಗಲೇ... ಪರಸ್ಪರರ ಸಂದೇಶಗಳು ಇದ್ದಕ್ಕಿದ್ದಂತೆ ನಿಧಾನಗತಿ ಪಡೆದುಕೊಂಡವು. ಮೊದಲಿನಷ್ಟು ವೇಗವಾಗಿ ಪಟಪಟನೆ ತಲುಪುತ್ತಿರಲಿಲ್ಲ. ಟೈಪಿಸಲು ಬೆರಳುಗಳು ತಡವರಿಸುತ್ತಿದ್ದವು. ಏನೋ ಬರೆಯುತ್ತಿದ್ದಾಳೆಂದು ಗೊತ್ತಾದರೂ ಅದು ತಲುಪಲು ಸಮಯ ತೆಗೆದುಕೊಳ್ಳುತ್ತಿತ್ತು. ಆ ದಿನ ಪರಸ್ಪರರು ಹೃದಯದ ಪಿಸುಮಾತಿಗೆ ಅಕ್ಷರವಾಗಿದ್ದರು. ಈ ಅಪರೂಪದ ರಾತ್ರಿಯ ಸಂಭಾಷಣೆಯಲ್ಲಿ ಏನೆಂದು ಯಾರೂ ಹೇಳಿಕೊಳ್ಳದಿದ್ದರೂ ನಾಡಿದ್ದು ಪ್ರೇಮಿಗಳ ದಿನದಂದು ಬೆಳ್ಳಂಬೆಳಗ್ಗೆ ನಂದಿ ಬೆಟ್ಟಕ್ಕೆ